## ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕೆ.ಆರ್ ನಗರ

**ಸಿಸಿ ನಂ. 344/2023**

**ಪಿರ್ಯಾದುದಾರರುಃ** ಶ್ರೀ ರಮೇಶ ಹೆಚ್.ಕೆ ಬಿನ್ ಲೇಟ್ ಕರೀಗೌಡ,

**--ವಿರುದ್ಧ –**

**ಆರೋಪಿಃ** ಶ್ರೀ ಸುನೀಲ್ ಕುಮಾರ.ಡಿ.ಎಂ ಬಿನ್ ಮಹದೇವ

**ಆಪಾದನೆ**

ಆರೋಪಿಯಾದ ನೀವು ಪಿರ್ಯಾದುದಾರರಿಗೆ ಕಾನೂನುಬದ್ಧವಾಗಿ ಪಾವತಿ ಮಾಡಬೇಕಾದ ರೂ.1,50,000/- ಮರುಪಾವತಿಗಾಗಿ **ಕೆನರಾ ಬ್ಯಾಂಕ್., ಕೆ ಆರ್ ನಗರ ಶಾಖೆ,** ಚೆಕ್ ನಂಃ 608041 ದಿನಾಂಕಃ 20.04.2023 ರೂ.1,50,000/- ಎಂದು ನಮೂದಿಸಿ ಚೆಕ್ಕನ್ನು ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಖಾತೆಯನ್ನು ಹೊಂದಿರುವ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಳಿಯೂರು ಶಾಖೆ,** ಇಲ್ಲಿ ನಗದೀಕರಿಸಲು ಹಾಜರುಪಡಿಸಿದಾಗ, ಸದರಿಯವರು ನಿಮ್ಮ ಖಾತೆಯಲ್ಲಿ **"ಸಾಕಷ್ಟು ಹಣವಿಲ್ಲ"** ಎಂಬ ಹಿಂಬರಹಗಳೊಂದಿಗೆ ಚೆಕ್ಕು ಅಮಾನ್ಯಗೊಂಡಿದ್ದು, ಆ ಬಗ್ಗೆ ಸದರಿ ಬ್ಯಾಂಕಿನವರು ದಿನಾಂಕ: 01.06.2023 ರಂದು ಹಿಂಬರಹವನ್ನು ನೀಡಿದ್ದು, ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮುಖಾಂತರ ದಿನಾಂಕಃ 21.06.2023 ರಂದು ಬರವಣಿಗೆ ರೂಪದಲ್ಲಿ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದರೂ ಸಹ ಚೆಕ್ಕಿನಲ್ಲಿರುವ ಹಣವನ್ನು ಮರುಪಾವತಿ ಮಾಡಿರುವುದಿಲ್ಲ, ಆ ಕಾರಣ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿದ್ದೀರೆಂದು ಆಪಾದಿಸಲಾಗಿದೆ.

ಪ್ರಶ್ನೆಃ-1 ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆ-2 ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೇ?
ಉತ್ತರಃ

(ದಿನಾಂಕ 09.09.2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ಧೃಡೀಕರಿಸಿದೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಕೆ ಆರ್ ನಗರ.**